ಪರ್ವ ಪ್ರಾರಂಭವಾಯಿತು. ಶ್ರೀರಾಮಕೃಷ್ಣರ ಸಂನ್ಯಾಸೀ ಶಿಷ್ಯರ ಜೀವನ ಅನೇಕ ಪ್ರಮುಖ ಘಟ್ಟಗಳಲ್ಲಿ ಇರುವುದನ್ನು ನಾವು ನೋಡುವೆವು: ಮೊದಲನೆಯದು, ಅವರು ತಮ್ಮ ಗುರುಗಳ ಜತೆ ಕಳೆದ ಕಾಲ; ಎರಡನೆಯದು, ಶ್ರೀರಾಮಕೃಷ್ಣರು ೧೮೮೬ರಲ್ಲಿ ಕಾಲವಾದ ನಂತರದ ಜೀವನ ಕಠೋರ ವೈರಾಗ್ಯ, ತಪಶ್ಚರ್ಯೆ, ಮತ್ತು ಪರಿವ್ರಾಜಕ ಜೀವನ; ಮೂರನೆಯದು, ಸ್ವಾಮಿ ವಿವೇಕಾನಂದರು ಪಾಶ್ಚಿಮಾತ್ಯ ದೇಶಗಳಿಂದ ಹಿಂತಿರುಗಿದ ನಂತರದ್ದು. ಈ ಮೂರನೆಯ ಕಾಲವು ಸ್ವಾಮಿ ವಿವೇಕಾನಂದರು ೧೮೯೩ರಲ್ಲಿ ಅಮೆರಿಕಾಕ್ಕೆ ಹೋಗಿ ಬೋಧನೆಯನ್ನು ಪ್ರಾರಂಭಿಸಿದಾಗಲೇ ಆರಂಭವಾಯಿತೆನ್ನಬಹುದು, ಏಕೆಂದರೆ ಅವರ ಲೋಕಶಿಕ್ಷಣ ಆರಂಭವಾದುದು ಆಗಲೇ. ನಿಮಗೆ ತಿಳಿದಂತೆ ಸ್ವಾಮೀಜಿಯವರು ತಮ್ಮ ವಾಗ್ವೈಭವ ಮತ್ತು ಬೋಧನೆಗಳಿಂದ ಅಮೆರಿಕಾದ ಮೇಲೆ ಆಳವಾದ ಪರಿಣಾಮವನ್ನುಂಟುಮಾಡಿದರು. ಅವರ ಸೋದರ ಸಂನ್ಯಾಸಿಗಳು ಅವರ ಯಶಸ್ಸಿನ ಬಗ್ಗೆ ತಿಳಿದ ಮೇಲೆ ಮತ್ತು ಅವರ ಅಮೆರಿಕಾದ ಪ್ರವಚನಗಳ ವೃತ್ತಪತ್ರಿಕಾವರದಿಗಳನ್ನು ನೋಡಿದ ಮೇಲೆ ಸ್ವಾಮೀಜಿಯವರ ಬಗ್ಗೆ ಹೆಮ್ಮೆಪಟ್ಟರು. ಆದರೆ ಅದರಿಂದ ಅವರ ಮನಸ್ಸೂ ಸ್ವಲ್ಪ ಕದಡಿತು.

ಪಶ್ಚಿಮ ದೇಶಗಳಲ್ಲಿ ಸ್ವಾಮಿ ವಿವೇಕಾನಂದರು ಅದ್ವೈತ ವೇದಾಂತವನ್ನು ಬೋಧಿಸಿದರು. ಶ್ರೀರಾಮಕೃಷ್ಣರೂ ಕೂಡ ವೇದಾಂತದ ಬಗ್ಗೆ ಮಾತನಾಡಿದ್ದರು. ಆದರೆ ಅವರು ಭಗವಂತನ ಸಾಕ್ಷಾತ್ಕಾರಕ್ಕೆ ಇರುವ ಅನೇಕ ಮಾರ್ಗಗಳ ಬಗ್ಗೆ ಮಾತನಾಡಿದ್ದರು; ಸ್ವಾಮೀಜಿಯವರಂತೆ ಅವೆಲ್ಲವನ್ನೂ ವೇದಾಂತವೆಂಬ ಒಂದೇ ಹೆಸರಿನಡಿ ತಂದಿರಲಿಲ್ಲ. ಇದು ಅವರ ಸೋದರ ಸಂನ್ಯಾಸಿಗಳಿಗೆ ಒಗಟಿನಂತಾಯಿತು. ಅಲ್ಲದೆ, ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರ ಬಗ್ಗೆ ಬಹಿರಂಗವಾಗಿ ಏನನ್ನೂ ಬೋಧಿಸಲಿಲ್ಲ. ಶ್ರೀರಾಮಕೃಷ್ಣರನ್ನು ಅವತಾರ ಪುರುಷರೆಂದೂ, ಸ್ವಾಮಿ ವಿವೇಕಾನಂದರು ಅವರ ಸಂದೇಶ ವಾಹಕರೆಂದೂ ಸೋದರ ಸಂನ್ಯಾಸಿಗಳೆಲ್ಲ ಗುರುತಿಸಿದ್ದರು. ಸ್ವಾಮೀಜಿಯವರು ತಮ್ಮ ಗುರುಗಳ ಬಗ್ಗೆ ಎರಡು ಪ್ರವಚನಗಳನ್ನು ಕೊಟ್ಟಿದ್ದರು, ಅಷ್ಟೆ. ಅವರು, ''ನನ್ನ ಗುರುಗಳು ಒಬ್ಬ ಅವತಾರಪುರುಷರು, ಮಾನವರ ಉದ್ಧಾರಕ್ಕಾಗಿ ಭೂಮಿಯ ಮೇಲೆ ಅವತರಿಸಿದರು. ಇವು ಅವರ ಬೋಧನೆಗಳು, ಇದು ಅವರ ಜೀವನ; ಅವರನ್ನು ನೀವು ಪೂಜಿಸಿ, ನೀವು ಮುಕ್ತರಾಗುವಿರಿ'' ಎಂದು ಹೇಳಲಿಲ್ಲ. ಇದಾವುದನ್ನೂ ಅವರು ಬೋಧಿಸಲಿಲ್ಲ. ಕೇವಲ ತತ್ತ್ವಗಳನ್ನು ಪ್ರತಿಪಾದಿಸಿದರು. ಇದೂ ಕೂಡ ಕೆಲವು ಸೋದರ ಸಂನ್ಯಾಸಿಗಳಿಗೆ ಒಗಟಾಗಿ ಕಂಡಿತು. ಈಶ್ವರವಾದ ಮತ್ತು ಭಕ್ತಿಮಾರ್ಗ ಇವೇ ಶ್ರೀರಾಮಕೃಷ್ಣರ ಬೋಧನೆಯ ಸಾರಾಂಶವಾಗಿತ್ತು. ಸ್ವಾಮಿ ವಿವೇಕಾನಂದರು ಮುಖ್ಯವಾಗಿ ಅದ್ವೈತವನ್ನು ಬೋಧಿಸಲು ಪ್ರಾರಂಭಿಸಿದರು. ಅವರು ಜನರನ್ನು ಶುದ್ಧ-ಬುದ್ಧ-ಮುಕ್ತಾತ್ಮರೆಂದೂ, ತಮ್ಮಲ್ಲಿ ಅನಂತ ಶಕ್ತಿ ಅಂತರ್ಗತವಾಗಿರುವುದೆಂದು ಭಾವಿಸಬೇಕೆಂದೂ ಬೋಧಿಸಿದರು. ಇದನ್ನು ಕೇಳಿದ ಸೋದರ ಸಂನ್ಯಾಸಿಗಳನೇಕರು, ಸ್ವಾಮೀಜಿಯವರು ಶ್ರೀರಾಮಕೃಷ್ಣರನ್ನು ಮರೆತಿರುವರು ಮತ್ತು ತಮ್ಮದೇ ಆದ ಮಾರ್ಗದಲ್ಲಿ ಹೋಗುತ್ತಿರುವರು ಎಂಬ ಅವಸರದ ನಿರ್ಧಾರಕ್ಕೆ ಬಂದರು.

ಇದರ ಜೊತೆಗೆ ಸ್ವಾಮಿ ವಿವೇಕಾನಂದರು ಅಮೆರಿಕಾದಿಂದ ತಮ್ಮ ಸೋದರ ಸಂನ್ಯಾಸಿಗಳಿಗೆ ಕಿಡಿಕಾರುವ ಪತ್ರಗಳನ್ನು ಬರೆಯುತ್ತಿದ್ದರು. ಅವುಗಳಲ್ಲಿದ್ದ ಮುಖ್ಯವಾದ ಅಂಶವೆಂದರೆ, ಸಂನ್ಯಾಸಿಗಳು ಮಠದಲ್ಲಿ ಬಾಹ್ಯಪೂಜೆಯನ್ನು ಕಡಿಮೆ ಮಾಡಬೇಕೆಂಬುದಾಗಿತ್ತು. ನೀವು ಪೂಜಿಸಬೇಕಾದರೆ ಭಗವಂತನ ವಿರಾಡ್ರೂಪವನ್ನು ಪೂಜಿಸಿ. ಅವನು ಈ ಪ್ರಪಂಚದಲ್ಲಿ ವ್ಯಕ್ತನಾಗಿರುವನು, ಅದರಲ್ಲೂ ಮನುಷ್ಯನ ರೂಪದಲ್ಲಿ ಎಂದು ಹೇಳಿದರು. ''ನಮ್ಮ ಕಣ್ಣಿನ ಮುಂದೆಯೇ ಜೀವಂತ ಭಗವಂತ – ಮನುಷ್ಯ – ಇರುವಾಗ, ಗುಡಿಯೊಂದನ್ನು ಕಟ್ಟಿ ಅದರಲ್ಲಿ ದೇವರ ಒಂದು ಚಿತ್ರವನ್ನೋ ವಿಗ್ರಹವನ್ನೋ ಪ್ರತೀಕವಾಗಿ ಇರಿಸಿ, ಅದಕ್ಕೆ ನೈವೇದ್ಯ ಮತ್ತು ಎಲ್ಲ ವಿಧವಾದ ಶಾಸ್ತ್ರೋಕ್ತ ಪೂಜೆಯನ್ನು ಮಾಡುವುದರಿಂದ ಏನು ಪ್ರಯೋಜನ? ವಿಗ್ರಹ ಅಥವಾ ಚಿಹ್ನೆ ಭೌತಿಕವಾದುದು, ನಿರ್ಜೀವವಾದುದು; ಅಲ್ಲಿ ದೇವರು ಇರುವನೆಂದು ನೀವು ಊಹಿಸಬೇಕಾಗುವುದು. ಆದರೆ ಇಲ್ಲಿ ಇರುವ ಮಾನವರೆಲ್ಲರೂ ಭಗವಂತನ ಜೀವಂತ ಪ್ರತೀಕವಾಗಿರುವರು. ಅಲ್ಲಿ ನೀವು ಚೈತನ್ಯವನ್ನು ಊಹಿಸಿಕೊಳ್ಳಬೇಕಾಗಿಲ್ಲ. ಅವರೆಲ್ಲ ಆಗಲೆ ಚೈತನ್ಯಮಯರಾಗಿರುವರು. ಭಗವಂತ ಆಗಲೆ ಅಲ್ಲಿ ಇರುವನು. ಅವನನ್ನು ಪೂಜಿಸಿ!''

ಈ ದೃಷ್ಟಿಯಿಂದ ಅವರು ಸೋದರ ಸಂನ್ಯಾಸಿಗಳಿಗೆ, ಗ್ರಾಮದ ಜನರನ್ನು ವಿದ್ಯಾವಂತರನ್ನಾಗಿ ಮಾಡುವಂತೆ, ರೋಗಿಗಳಿಗೆ ಶುಶ್ರೂಷೆ ಮಾಡುವಂತೆ, ಹಸಿದವರಿಗೆ ಆಹಾರ ನೀಡುವಂತೆ, ಭಾರತದ ಜನರಿಗೆ ಎಲ್ಲ ಬಗೆಯ ಸೇವೆ ಮಾಡುವಂತೆ ಹೇಳಲಾರಂಭಿಸಿದರು. ಈ ಬಗೆಯ ಮಾನವ ಸೇವೆಗಾಗಿ ಅವರೆಲ್ಲ ಒಟ್ಟುಗೂಡುವಂತೆ ಹೇಳಿದರು. ಈಗ ಇದೂ ಕೂಡ ಶ್ರೀರಾಮಕೃಷ್ಣರು ಬೋಧಿಸಿದ್ದುದಕ್ಕೆ ವಿರೋಧವಾಗಿರುವಂತೆ ಅವರಿಗೆ ಕಂಡಿತು. ಸ್ವಾಮಿ ವಿವೇಕಾನಂದರು ತಮ್ಮ ಗುರುಭಾಯಿಗಳನ್ನು ಪ್ರಪಂಚಕ್ಕೆ ಭೌತಿಕಕಾರ್ಯಗಳಿಗೆ ತಳ್ಳುತ್ತಿದ್ದರು, ಆದರೆ ಶ್ರೀರಾಮಕೃಷ್ಣರು ಅವರನ್ನು ಅಂತಹ ವಿಷಯಗಳಿಂದ ಹಿಮ್ಮುಖವಾಗುವಂತೆ, ಜಪ ಧ್ಯಾನ ಮುಂತಾದ ಆಧ್ಯಾತ್ಮಿಕ ಸಾಧನೆಗಳಲ್ಲಿ ಸಂಪೂರ್ಣವಾಗಿ ತೊಡಗುವಂತೆ ಹೇಳಿದ್ದರು.

*(ಮುಂದುವರಿಯುವುದು)* ✷

ಸ್ವಾಮಿ ನಿತ್ಯಸ್ಥಾನಂದ

# ಭಕ್ತನ ಲಕ್ಷಣ




### ಭಾಗ ೧

ಭಕ್ತಿ ಎಂದರೆ ಭಗವಂತನನ್ನು ಪೂಜಿಸುವುದು, ಪ್ರಾರ್ಥಿಸುವುದು, ಅವನ ನಾಮ ಗುಣ ಕೀರ್ತನೆ ಮಾಡುವುದು ಇತ್ಯಾದಿ. ಆದರೆ ಇಷ್ಟು ಮಾಡಿಬಿಟ್ಟರೆ ಸಾಕು, ಜೀವನವನ್ನು ಹೇಗೆ ಬೇಕಾದರೂ ನಡೆಸಬಹುದು ಎಂದರೆ ನಡೆಯುವುದಿಲ್ಲ. ದೇವಸ್ಥಾನಕ್ಕೆ ಹೋಗುವುದು, ಅಲ್ಲಿ ಸೇವೆ ಸಲ್ಲಿಸುವುದು, ಭಗವತ್ಸಂಬಂಧವಾದ ಉಪನ್ಯಾಸಗಳನ್ನು ಕೇಳುವುದು, ಮನೆಗೆ ಹೋಗಿ ಮನ ಬಂದಂತೆ ವರ್ತಿಸುವುದು, ಮಾತನಾಡುವುದು ಮತ್ತು ಆಲೋಚಿಸುವುದು – ಅನೇಕರಿಗೆ ಧರ್ಮ ಎಂದರೆ ಇಷ್ಟೇ. ಅನೇಕರ ನಿತ್ಯ ಜೀವನಕ್ಕೂ ಧಾರ್ಮಿಕ ಆಚರಣೆಗೂ ಸಂಬಂಧವೇ ಇರುವುದಿಲ್ಲ – ಧರ್ಮವೇ ಬೇರೆ, ವ್ಯವಹಾರವೇ ಬೇರೆ. ಹೀಗೆ ಅವರು ದ್ವಿಬಗೆಯ ಅಥವಾ ಬಹುಬಗೆಯ ಜೀವನ ನಡೆಸುತ್ತಾರೆ. ತಮ್ಮ ವ್ಯವಹಾರದಲ್ಲಿ ಯಥಾರ್ಥ ಧರ್ಮಭಾವ ಪ್ರವೇಶಿಸದಂತೆ ಅವರು ತುಂಬ ಎಚ್ಚರಿಕೆ ವಹಿಸುತ್ತಾರೆ. ದೇವರಿಗೆ ಪ್ರತ್ಯೇಕವಾದ ಸ್ಥಾನವನ್ನು ಕಲ್ಪಿಸಲಾಗಿದೆ, ಅವನು ದೇವಸ್ಥಾನದಲ್ಲಿಯೇ ಇರಲಿ, ಅವನು ನಮ್ಮ ದಿನನಿತ್ಯ ವ್ಯವಹಾರದಲ್ಲಿ ಪ್ರವೇಶಿಸಬಾರದು, ನಾವೇ ಅವನೆಡೆಗೆ ಹೋಗುತ್ತೇವೆ, ಅವನು ನಮ್ಮೆಡೆಗೆ ಬಂದರೆ ಅವನಿಗೂ ತೊಂದರೆ ನಮಗೂ ತೊಂದರೆ – ಇದು ಅನೇಕರ ಧೋರಣೆ, ಆದರೆ ಬಾಯಿಬಿಟ್ಟು ಹೇಳುವುದಿಲ್ಲ ಅಷ್ಟೇ. ಆಶ್ಚರ್ಯವೇನೆಂದರೆ, ನಾವು ದೇವರನ್ನು ಅಂತರ್ಯಾಮಿ, ಅಂತರಾತ್ಮ, ಸರ್ವವ್ಯಾಪಿ ಎಂದು ಕರೆಯುತ್ತೇವೆ, ಆದರೆ ಅವನನ್ನು ದೂರವಿರಿಸುತ್ತೇವೆ. ಅಂತರ್ಯಾಮಿಯಾದ ಭಗವಂತನು ನಮ್ಮ ಎಲ್ಲ ಮಾತು ಕೃತಿ ಆಲೋಚನೆಗಳ ಮೇಲೆ ತನ್ನ ಪ್ರಭಾವ ಬೀರಬೇಕು, ನಮ್ಮ ಜೀವನವನ್ನು ಪರಿವರ್ತಿಸಬೇಕು. ನಾವು ಇದಕ್ಕೆ ಅವಕಾಶ ಕೊಡುವುದಿಲ್ಲ – ಪ್ರಾಪಂಚಿಕ ಆಕರ್ಷಣೆ ಭಗವದಾಕರ್ಷಣೆಗಿಂತ ಪ್ರಬಲವಾಗಿರುವುದರಿಂದ.

ತರಕಾರಿಯನ್ನು ಒಲೆಯ ಮೇಲಿಟ್ಟು ಬೆಂಕಿಯನ್ನು ಹೊತ್ತಿಸಿದರೆ ಮಾತ್ರ ಅದು ಬೆಂದು ಪರಿವರ್ತನೆಗೊಳ್ಳುತ್ತದೆ. ಬೆಂಕಿಯನ್ನೇ ಹೊತ್ತಿಸದಿದ್ದರೆ ಯಾವ ಬದಲಾವಣೆಯೂ ಆಗುವುದಿಲ್ಲ. ಹಾಗೆಯೇ ಕೇವಲ ಧಾರ್ಮಿಕ ಆಚರಣೆಯಿಂದ ಏನೂ ಪ್ರಯೋಜನವಿಲ್ಲ, ಅದು ಭಕ್ತಿಭಾವಾಗ್ನಿಯಿಂದ ಉರಿಯಬೇಕು. ಆಗ ಅದು ನಮ್ಮ ವ್ಯಕ್ತಿತ್ವದ ಎಲ್ಲ ಅಂಶಗಳನ್ನೂ ಬೇಯಿಸಿ ಪಕ್ವಗೊಳಿಸುತ್ತದೆ, ಇಡೀ ವ್ಯಕ್ತಿತ್ವವೇ ಆಗ ಸಂಪೂರ್ಣ ಪರಿವರ್ತಿತವಾಗುತ್ತದೆ. ಅಂತಹ ಪರಿವರ್ತಿತ ವ್ಯಕ್ತಿಯ ಲಕ್ಷಣಗಳಾವುವು ಎಂಬುದನ್ನು ಶ್ರೀಕೃಷ್ಣನು ಹನ್ನೆರಡನೆಯ ಅಧ್ಯಾಯದಲ್ಲಿ ವಿವರಿಸುತ್ತಾನೆ. ಈ ಲಕ್ಷಣಗಳು ಯಾವ ವ್ಯಕ್ತಿಯಲ್ಲಿ ಇರುತ್ತವೆಯೋ ಅವನೇ ನಿಜವಾದ ಭಕ್ತನು. ಈ ಲಕ್ಷಣಗಳನ್ನು ಮನಸ್ಸಿನಲ್ಲಿಟ್ಟುಕೊಂಡು ನಾವು ಎಷ್ಟರಮಟ್ಟಿಗೆ ಭಕ್ತರು ಎಂಬುದನ್ನು ತಿಳಿದುಕೊಳ್ಳಬಹುದು. ಇವುಗಳನ್ನು ನಮಗೇ ಅನ್ವಯಿಸಿಕೊಳ್ಳಬೇಕು, ಇತರರಿಗಲ್ಲ. ಈ ಗುಣಗಳು ಭಕ್ತಿಯ ಪರಿಣಾಮ ಮಾತ್ರವಲ್ಲದೆ, ಭಕ್ತಿಯೇ ಇವುಗಳ ಫಲವೂ ಆಗಬಹುದು. ಇವು ಯಾವುವೆಂಬುದನ್ನು ನೋಡೋಣ.

**೧. ಅದ್ವೇಷ್ಟಾ ಸರ್ವಭೂತಾನಾಂ :** ಯಾರನ್ನೂ ಯಾವುದನ್ನೂ ದ್ವೇಷಿಸದವನು. ಪ್ರೀತಿ ಮತ್ತು ದ್ವೇಷ ಎರಡು ಒಟ್ಟಿಗೆ ಇರಲಾರವು ಬೆಳಕು ಕತ್ತಲೆಗಳಂತೆ. ಭಗವಂತನನ್ನು ಪ್ರೀತಿಸಿ ಇತರರನ್ನು ದ್ವೇಷಿಸಲಾಗುವುದಿಲ್ಲ. ಏಕೆಂದರೆ ಪ್ರೀತಿ ಎನ್ನುವುದು ಒಂದು ದೈವೀಗುಣ. ಅದು ಹೃದಯದಲ್ಲಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಬೇಕಾದರೆ ಅಲ್ಲಿ ದ್ವೇಷದ ಲವಲೇಶವೂ ಇರುವಂತಿಲ್ಲ. ರೈತನು ಹೊಲದಲ್ಲಿ ಬಿತ್ತನೆ ಮಾಡುವುದಕ್ಕೆ ಮುಂಚೆ ಎಲ್ಲ ಕಳೆಯನ್ನೂ ಕಿತ್ತು ಅದನ್ನು 'ನಿಷ್ಕಳೆ'ಯಾಗಿ ಮಾಡುತ್ತಾನೆ. ಆಗಲೇ ಫಸಲು ಚೆನ್ನಾಗಿ ಬರುವುದಕ್ಕೆ ಸಾಧ್ಯ. ಮೈಕೇಲ್ ನೈಮಿ ಎಂಬುವವರು ಹೇಳುತ್ತಾರೆ : ''ಹೃದಯದಲ್ಲಿ ದ್ವೇಷವಿರುವವರೆಗೂ ಪ್ರೀತಿಯ ಸುಖವನ್ನು ಅನುಭವಿಸಲಾಗುವುದಿಲ್ಲ.'' ಜಡವಸ್ತುವಿಂದಾಗಲಿ, ಪ್ರಾಣಿಯಿಂದಾಗಲಿ, ಮಗುವಿನಿಂದಾಗಲಿ ತೊಂದರೆಯುಂಟಾದರೆ ನಾವು ಅದನ್ನು ದ್ವೇಷಿಸುವುದಿಲ್ಲ. ಆದರೆ ಮನುಷ್ಯನಿಂದಾದರೆ ದ್ವೇಷಿಸುತ್ತೇವೆ. ಏಕೆಂದರೆ ಮನುಷ್ಯನ ಕೃತಿಯ ಹಿಂದೆ ಒಂದು ಉದ್ದೇಶವನ್ನು ನಾವು ಆರೋಪಿಸುತ್ತೇವೆ. ಇದನ್ನು ಇನ್ನೊಂದು ದೃಷ್ಟಿಯಿಂದ ನಾವು ನೋಡಬಹುದು. ಒಂದು ಕೊಂಬೆಯು ಮೈಮೇಲೆ ಬಿದ್ದು ಗಾಯವಾದರೆ ನಾವು ಮರವನ್ನು ದ್ವೇಷಿಸುತ್ತೇವೆಯೆ? ಇಲ್ಲ. ಕೊಂಬೆಯು ಕೆಳಗೆಬೀಳುವುದು ಪ್ರಕೃತಿಯ ಕಾರ್ಯಕಾರಣ ನಿಯಮವನ್ನು ಅನುಸರಿಸಿ ನಮ್ಮ ಮೈಮೇಲೆ ಬೀಳುವುದು ಒಂದು ಆಕಸ್ಮಿಕ

ಅಷ್ಟೇ. ಹಾಗೆಯೇ ಒಬ್ಬ ವ್ಯಕ್ತಿಯು ನಮಗೆ ತೊಂದರೆ ಕೊಡುವುದು ಪ್ರಕೃತಿಯ ಅಂಶವಾದ ಮಾನಸಿಕ ಕಾರ್ಯಕಾರಣ ನಿಯಮವನ್ನು ಅನುಸರಿಸಿಯೇ. ಅವನು ಆ ವಿಷಯದಲ್ಲಿ ಅಸಹಾಯಕನಾಗಿರುತ್ತಾನೆ. ಅದನ್ನು ನಿಗ್ರಹಿಸುವ ಸಾಮರ್ಥ್ಯ ಅವನಿಗಿದೆ ನಿಜ. ಆದರೆ ಅವನಿನ್ನೂ ಆ ಸ್ಥಿತಿಯನ್ನು ಮುಟ್ಟಿರುವುದಿಲ್ಲ. ಆದರೆ ನಾವು ಪ್ರತಿಕ್ರಿಯೆ ತೋರಿಸಿದರೆ, ಪ್ರತಿಯಾಗಿ ಅವನನ್ನು ದ್ವೇಷಿಸಿದರೆ ನಾವೂ ಅವನ ಮಟ್ಟಕ್ಕೆ ಇಳಿದಂತಾಗುತ್ತದೆ.

ಎಲ್ಲರೂ ನಮ್ಮವರೇ ಆದಾಗ ದ್ವೇಷಕ್ಕೆ ಅವಕಾಶವಿರುವುದಿಲ್ಲ. ಯಾರಿಂದಾದರೂ ತೊಂದರೆಯಾದರೂ ಅದನ್ನು ಸಹಿಸಿಕೊಳ್ಳುತ್ತೇವೆ. ಕೆಲವೊಮ್ಮೆ ತಿನ್ನುವಾಗ ಹಲ್ಲು ನಾಲಿಗೆಯನ್ನು ಕಚ್ಚಿ ನೋವನ್ನುಂಟುಮಾಡುತ್ತದೆ. ಇಲ್ಲಿ ನಾಲಿಗೆಯೂ ನಮ್ಮದೆ, ಹಲ್ಲೂ ನಮ್ಮದೆ. ನಾವು ಹಲ್ಲಿಗೆ ಶಿಕ್ಷೆ ಕೊಡಲಾಗುವುದೆ? ಒಂದು ಸುಂದರ ಸಂಸ್ಕೃತ ಸುಭಾಷಿತವಿದೆ :

**ಉಪಕಾರಿಷು ಯಃ ಸಾಧುಃ ಸಾಧುತ್ವೇ ತಸ್ಯ ಕೋ ಗುಣಃ ।**
**ಅಪಕಾರಿಷು ಯಃ ಸಾಧುಃ ಸ ಸಾಧುಃ ಸದ್ಭಿರುಚ್ಯತೇ ॥**

'ಉಪಕಾರ ಮಾಡಿದವರ ವಿಷಯದಲ್ಲಿ ಸಾಧುವಾಗಿರುವುದರಲ್ಲಿ ಹೆಗ್ಗಳಿಕೆಯೇನಿದೆ? ಯಾರು ಅಪಕಾರಿಗಳ ವಿಷಯದಲ್ಲಿಯೂ ಸಾಧುವಾಗಿರುತ್ತಾನೋ ಅವನೇ ನಿಜವಾದ ಸಾಧು.'

'ಭಕ್ತಿ ಸೌರಭ' ಎಂಬ ಗ್ರಂಥದಲ್ಲಿ ದ್ವೇಷ ಶಬ್ದದ ವಿವರಣೆ ಈ ರೀತಿ ಇದೆ :

''ದ್ವಿ–ವಿಷವು ದ್ವೇಷ. ಈ ದ್ವೇಷವೆನ್ನುವುದು ಎರಡರಷ್ಟು ವಿಷವೆಂದು ಅರ್ಥ. ಲೋಕದಲ್ಲಿ ವಿಷಪ್ರಾಶನಕ್ಕೆ ಗುರಿಯಾದವರು ಸಾಯುತ್ತಾರೆ, ವಿಷವಿಟ್ಟವರು ಸಾಯುವುದಿಲ್ಲ. ಆದರೆ ದ್ವೇಷವು ಹಾಗಲ್ಲ, ದ್ವೇಷಿಸುವವರು, ದ್ವೇಷಕ್ಕೆ ಗುರಿಯಾದವರು ಇಬ್ಬರೂ ನಾಶವಾಗುತ್ತಾರೆ.''

ನಾವು ಯಾರನ್ನು ದ್ವೇಷಿಸಿದರೂ ಭಗವಂತನನ್ನೇ ದ್ವೇಷಿಸಿದಂತಾಗುತ್ತದೆ. ಏಕೆಂದರೆ ಎಲ್ಲರೂ ಯಥಾರ್ಥ ದೃಷ್ಟಿಯಿಂದ ಭಗವತ್ ಸ್ವರೂಪರೇ ತಾನೆ. ಈ ಭಾವನೆಯನ್ನು ದೀನನಾಥ್ ದಿನೇಶ್ ಎಂಬುವವರು ವಿಶಿಷ್ಟ ರೀತಿಯಲ್ಲಿ ವ್ಯಕ್ತಪಡಿಸಿರುವರು. **ಸರ್ವದೇವನಮಸ್ಕಾರಃ ಕೇಶವಂ ಪ್ರತಿಗಚ್ಛತಿ** – ''ಎಲ್ಲ ದೇವರಿಗೆ ಮಾಡಿದ ನಮಸ್ಕಾರಗಳೂ ಕೇಶವನಿಗೇ ತಲುಪುತ್ತವೆ'' ಎಂದು ನಾವು ಹೇಳುತ್ತೇವೆ. ಇದರಂತೆಯೇ **ಸರ್ವ ಜೀವತಿರಸ್ಕಾರಃ ಕೇಶವಂ ಪ್ರತಿಗಚ್ಛತಿ** ಎಲ್ಲ ಜೀವಿಗಳ ತಿರಸ್ಕಾರವೂ ಕೇಶವನನ್ನೇ ತಲಪುತ್ತದೆ – ಎಂಬುದೂ ಅಷ್ಟೇ ಸತ್ಯ. *('ಭಕ್ತಿ ಸೌರಭ' ದಿಂದ)*

೨. ಮೈತ್ರ: ಮಿತ್ರಭಾವದಿಂದ ಇರುವವನು. ಕೇವಲ ದ್ವೇಷಿಸದಿದ್ದರೆ ಸಾಲದು. ಎಲ್ಲರ ವಿಷಯದಲ್ಲಿಯೂ ಉದಾಸೀನರಾಗಿದ್ದು, ಯಾರೊಡನೆಯೂ ಬೆರೆಯದೆ, ಭಾವಹೀನರಾಗಿ ಒಂದು ಬಗೆಯ ಒಂಟಿತನದ ಜೀವನ ನಡೆಸುವವರು ಅನೇಕರಿದ್ದಾರೆ. ಅವರು ನಿಃಸಾರ್ಥಕ ಸಪ್ಪೆಯ ಜೀವನ ನಡೆಸುತ್ತಾರೆ. ಅವರು ಸುಖಿಗಳೂ ಅಲ್ಲ ದುಃಖಿಗಳೂ ಅಲ್ಲ. ಅವರು ಸುಖದುಃಖಗಳನ್ನು ಭಾವಿಸುವಷ್ಟು ವಿಕಾಸ ಹೊಂದಿರುವುದಿಲ್ಲ. ಇಂತಹ ಜಡಸ್ವಭಾವದ ವ್ಯಕ್ತಿಗಳು ಯಾವುದಕ್ಕೂ ಯೋಗ್ಯರಲ್ಲ. ಆದರೆ ಭಕ್ತನಲ್ಲಿ ತೀವ್ರವಾಗಿ ಭಾವಿಸುವ ಶಕ್ತಿಯಿರುತ್ತದೆ. ಅವನು ಸಂಪೂರ್ಣವಾಗಿ ಸಾತ್ವಿಕ ಭಾವದಿಂದ ತುಂಬಿಕೊಂಡಿರುತ್ತಾನೆ. ಆದ್ದರಿಂದ ಅವನಿಗೆ ಎಲ್ಲರೂ ಮಿತ್ರರಾಗಿರುವುದು ಮಾತ್ರವಲ್ಲದೆ, ಅವನೂ ಎಲ್ಲರಿಗೂ ಮಿತ್ರನಾಗಿರುತ್ತಾನೆ. ''ಸಂಪತ್ತಿರುವಾಗ ಬರುತ್ತಾರೆ, ವಿಪತ್ತಿನಲ್ಲಿ ದೂರವಾಗುತ್ತಾರೆ'' – ಈ ಸ್ವಭಾವದ ವ್ಯಕ್ತಿಯಲ್ಲ ಅವನು.

ಮಹಾತ್ಮಾ ಗಾಂಧೀಜಿಯವರು ಚರಕದಲ್ಲಿ ನೂಲುತ್ತ ಕುಳಿತಿದ್ದರು. ಪಾಶ್ಚಾತ್ಯ ವ್ಯಕ್ತಿಯೋರ್ವನು ಅವರ ಸಂದರ್ಶನಕ್ಕಾಗಿ ಬಂದನು. ಮಾತಿನ ಸಂದರ್ಭದಲ್ಲಿ ಅವನು ಕೇಳಿದನು: ''ನಿನ್ನ ಶತ್ರುವನ್ನು ನೀನು ನಿನ್ನವನನ್ನಾಗಿ ಪ್ರೀತಿಸು ಎಂದು ಯೇಸುಕ್ರಿಸ್ತನು ಹೇಳುತ್ತಾನೆ. ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು?'' ಗಾಂಧೀಜಿಯವರು ಮುಗುಳ್ನಕ್ಕು, ''ನಾನು ಯಾರನ್ನೂ ಶತ್ರುವೆಂದು ಪರಿಗಣಿಸುವುದೇ ಇಲ್ಲ.'' ವಿಜಯಲಕ್ಷ್ಮಿ ಪಂಡಿತ್ ಅವರು ಒಂದು ಜಾಗತಿಕ ಸಮಾವೇಶದಲ್ಲಿ ಭಾರತದ ಪ್ರತಿನಿಧಿಯಾಗಿ ವಿದೇಶಕ್ಕೆ ಹೊರಡುವುದಕ್ಕೆ ಮುಂಚೆ ಗಾಂಧೀಜಿಯವರ ಆಶೀರ್ವಾದವನ್ನು ಪಡೆಯಲು ಹೋಗುತ್ತಾರೆ. ಗಾಂಧೀಜಿಯವರು ಅವರನ್ನು ವಿಚಾರಿಸಿದರು, ''ನೀನು ಮನೆಯವರಿಂದ ಬೀಳ್ಕೊಂಡಿದ್ದೀಯ?'' ಎಂದು. ಕೂಡಲೆ ವಿಜಯಲಕ್ಷ್ಮಿಯವರ ಮುಖ ಕೆಂಪಾಯಿತು. ಇವರು ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದು ಮನೆಯವರಿಗೆ ಇಷ್ಟವಿರಲಿಲ್ಲ. ಕೋಪೋದ್ರಿಕ್ತರಾಗಿ ಉತ್ತರಿಸಿದರು : ''ಇಲ್ಲ. ನನ್ನ ಕುಟುಂಬದವರು ನನಗೆ ಎಂಥ ಕೆಡುಕು ಮಾಡಿರುವರು? ನಾನು ಅವರನ್ನು ಎಂದೂ ಕ್ಷಮಿಸಲಾರೆ.'' ಗಾಂಧೀಜಿ ಉತ್ತರಿಸಿದರು, ''ನೀನಲ್ಲದೆ ಬೇರಾರೂ ನಿನಗೆ ಕೆಡುಕನ್ನುಂಟು ಮಾಡಲಾರರು. ನಿನಗೆ ಹಾನಿಯನ್ನುಂಟುಮಾಡುವಷ್ಟು ಕಟುತ್ವ ನಿನ್ನ ಹೃದಯದಲ್ಲಿ ಆಗಲೇ ಮನೆಮಾಡಿಕೊಂಡಿದೆ. ಮೊದಲು ಅವನ್ನು ಹೋಗಲಾಡಿಸು.'' ಹೊರಗಿನ ಶತ್ರು ನಿಜವಾದ ಶತ್ರುವಲ್ಲ, ಒಳಗಿನ ಶತ್ರುತ್ವ ಭಾವವೇ ನಮ್ಮ ನಿಜವಾದ ಶತ್ರು.

ಮೈಖೇಲ್ ನೈಮಿಯವರು ಹೇಳುತ್ತಾರೆ : ''ಎಲ್ಲಿಯವರೆಗೆ ನೀನು ಒಬ್ಬ ವ್ಯಕ್ತಿಯನ್ನಾದರೂ ಶತ್ರುವೆಂದು ಪರಿಗಣಿಸುತ್ತಿರುವೆಯೋ ಅಲ್ಲಿಯವರೆಗೆ ನಿನಗೆ ಸ್ನೇಹಿತನಿರುವುದಿಲ್ಲ. ಶತ್ರುತ್ವವನ್ನು ಪೋಷಿಸುವ ಹೃದಯವು ಮೈತ್ರಿಗೆ ಯೋಗ್ಯ ತಾಣವಲ್ಲ.'' *(Book of Mirdad)*

೩. **ಕರುಣ:** ಕರುಣೆಯುಳ್ಳವನು. ಮಾನವನು ಸಮಾಜಜೀವಿಯಾದುದರಿಂದ ಎಲ್ಲರಲ್ಲೂ ಸಾಮಾಜೀಕರಣದ, ಅಂದರೆ ಇತರರೊಡನೆ ಬೆರೆಯುವ, ಮಾತನಾಡುವ, ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಪ್ರವೃತ್ತಿಯಿರುತ್ತದೆ, ಮತ್ತು ಈ ಪ್ರವೃತ್ತಿಯೇ ಪ್ರೀತಿಯ ರೂಪದಲ್ಲಿ ವ್ಯಕ್ತವಾಗುತ್ತದೆ – ಎಂದು ಮನಶ್ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಅವರ ಪ್ರಕಾರ ಈ ಪ್ರವೃತ್ತಿಗೆ – ವೈಯಕ್ತಿಕ ದೋಷದಿಂದಾಗಲಿ ಅಥವಾ ಅಹಿತಕರ ಸಾಮಾಜಿಕ ಪರಿಸ್ಥಿತಿಯಿಂದಾಗಲಿ – ಅಡಚಣೆಯುಂಟಾದರೆ ಅದು ದ್ವೇಷವಾಗಿ ವ್ಯಕ್ತವಾಗುತ್ತದೆ. ಆಗ ವ್ಯಕ್ತಿಯು ನಿಷ್ಕರುಣಿಯಾಗುತ್ತಾನೆ. ಆದರೆ ಭಕ್ತನಾದವನು ಈ ಎಲ್ಲ ವೈಯಕ್ತಿಕ ಮತ್ತು ಸಾಮಾಜಿಕ ಲೋಪದೋಷಗಳನ್ನು ಮೀರಿದವನಾಗಿರಬೇಕು. ಆದ್ದರಿಂದ ಅವನ ಹೃದಯ ಕರುಣಾಪೂರ್ಣವಾಗಿರಬೇಕು, ಏಕೆಂದರೆ ಕರುಣಾಮಯ ಭಗವಂತನು ಅಲ್ಲಿ ನೆಲೆಸಿರುವನು.

ಅಮೃತಕ್ಕಾಗಿ ಸಮುದ್ರಮಂಥನದ ಸಂದರ್ಭದಲ್ಲಿ ಮೊದಲು ಕಾಣಿಸಿಕೊಂಡದ್ದು ಹಾಲಾಹಲ. ಅದು ಜಗತ್ತನ್ನೇ ದಹಿಸುವಷ್ಟು ತೀವ್ರವಾಗಿತ್ತು. ಎಲ್ಲರೂ ಭಯಭೀತರಾಗಿ ತತ್ತರಿಸಿ ಹೋದರು. ಎಲ್ಲರೂ ಶಿವನಲ್ಲಿ ಮೊರೆಹೊಕ್ಕರು. ಜನರ ದುಃಖವನ್ನು ತಾಳಲಾರದೆ ಶಿವನು ತಾನೇ ಆ ಅತಿಭಯಂಕರ ವಿಷವನ್ನು ಕುಡಿದು ಜೀರ್ಣಿಸಿಕೊಂಡನು. ಈ ಸಂದರ್ಭದಲ್ಲಿ ಭಾಗವತವು ಒಂದು ಮಹಾಸತ್ಯವನ್ನು ವ್ಯಕ್ತಪಡಿಸುತ್ತದೆ :

**ತಪ್ಯಂತೇ ಲೋಕತಾಪೇನ ಸಾಧವೋ ಪ್ರಾಯಶೋ ಜನಾಃ ।**
**ಪರಮಾರಾಧನಂ ತದ್ಧಿ ಪುರುಷಸ್ಯಾಖಿಲಾತ್ಮನಃ ॥**

''ಸಾಮಾನ್ಯವಾಗಿ ಸಾಧುಜನರು ಜನರ ದುಃಖದಿಂದ ದುಃಖಕ್ಕೊಳಗಾಗುತ್ತಾರೆ. ಇದೇ ಪರಮಪುರುಷನ ಶ್ರೇಷ್ಠ ಆರಾಧನೆ. ಏಕೆಂದರೆ ಅವನು ಎಲ್ಲರ ಅಂತರಾತ್ಮನಾಗಿರುವನು.'' ಸ್ವಾಮಿ ಯತೀಶ್ವರಾನಂದರು ಹೇಳುತ್ತಾರೆ : ''ಆಧ್ಯಾತ್ಮಿಕ ಜೀವನ ಭಕ್ತರಲ್ಲಿ ಇತರರ ಬಗ್ಗೆ ಕರುಣೆ ಕಳಕಳಿಯನ್ನು ಉಂಟು ಮಾಡದಿದ್ದರೆ, ಅಂಥ ಭಕ್ತಿಯಿಂದ ಏನು ಪ್ರಯೋಜನ?''

ಯಾರು ಪರದುಃಖದಿಂದ ದುಃಖಿಯೂ ಪರಸುಖದಿಂದ ಸುಖಿಯೂ ಆಗುವನೊ ಅವನೇ ನರರೂಪದಲ್ಲಿರುವ ಜಗದೀಶ್ವರನಾದ ಹರಿಯು ಎಂದು ನಾರದೀಯ ಪುರಾಣವು ಹೇಳುತ್ತದೆ:

**ಅನ್ಯದುಃಖೇನ ಯೋ ದುಃಖೀ ಯೋಽಧಿನ್ಯಹರ್ಷೇಣ ಹರ್ಷಿತಃ।**
**ಸ ಏವ ಜಗತಾಮೀಶೋ ನರರೂಪಧರೋ ಹರಿಃ ॥**

ಈ ಕರುಣೆಯು ಕೇವಲ ಮಾನಸಿಕ ಭಾವವಾಗಿ ಉಳಿ ಯದೆ ಕೃತಿಯಲ್ಲಿಯೂ ವ್ಯಕ್ತವಾಗಬೇಕು. ಆಗಲೇ ಅದು ಸಾರ್ಥಕವಾಗುತ್ತದೆ. ಅನೇಕರು ಇತರರ ಕಷ್ಟಸಂಕಟಗಳ ಬಗ್ಗೆ ಮರುಕವನ್ನು ವ್ಯಕ್ತಪಡಿಸುತ್ತಾರೆಯೇ ಹೊರತು ಸಹಾಯ ಮಾಡುವ ಪ್ರವೃತ್ತಿಯಿರುವುದಿಲ್ಲ. ಒಬ್ಬ ರಶಿಯನ್ ಮಹಿಳೆಯ ಉದಾಹರಣೆಯು ಈ ಸ್ಥಿತಿಯನ್ನು ವ್ಯಕ್ತಪಡಿಸುತ್ತದೆ. ಆಕೆ ನಾಟಕ ಮಂದಿರದೊಳಗೆ ಬೆಚ್ಚಗೆ ನಾಟಕ ನೋಡುತ್ತ ಕುಳಿತಿರುತ್ತಾಳೆ. ನಾಟಕದಲ್ಲಿ ಬರುವ ಕರುಣಾಜನಕ ದೃಶ್ಯವನ್ನು ನೋಡಿ ಕಣ್ಣೀರು ಸುರಿಸುತ್ತ ಬಿಕ್ಕಿ ಬಿಕ್ಕಿ ಅಳುತ್ತಾಳೆ. ಆದರೆ ಅದೇ ಸಂದರ್ಭದಲ್ಲಿ ಅವಳ ನತದೃಷ್ಟ ಸೇವಕನು ನಾಟಕ ನೋಡುವ ಅವಕಾಶವಿಲ್ಲದೆ ಮಂದಿರದ ಹೊರಗಡೆ ಚಳಿಯನ್ನು ತಡೆಯಲಾರದೆ ನಡುಗುತ್ತಿರುತ್ತಾನೆ. ಆತನ ಬಗ್ಗೆ ಆಕೆಗೆ ಯಾವ ಕನಿಕರವೂ ಇಲ್ಲ.

ಸ್ವಾಮಿ ವಿವೇಕಾನಂದರ ಪ್ರಕಾರ ಇತರರ ಕಷ್ಟಸಂಕಟಗಳನ್ನು ಭಾವಿಸುವ ಸಾಮರ್ಥ್ಯವೂ ಇರಬೇಕು, ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವ ಬುದ್ಧಿಶಕ್ತಿಯೂ ಬೇಕು ಹಾಗೂ ಕಾರ್ಯತತ್ಪರತೆಯೂ ಬೇಕು. ಈ ವಿಷಯವನ್ನು ಅವರ ಮಾತಿನಲ್ಲೇ ಕೇಳೋಣ: ''ಹೃದಯವಂತಿಕೆ, ವಿಚಾರಶಕ್ತಿ ಮತ್ತು ಕಾರ್ಯತತ್ಪರತೆ ಈ ಮೂರೂ ಒಂದೇ ಸಮನಾಗಿ ಯಾರಲ್ಲಿ ಪಕ್ವತೆಯನ್ನು ಹೊಂದಿದೆಯೋ ಅಂತಹ ವ್ಯಕ್ತಿಯನ್ನು ನೋಡಲು ನಾವು ಬಯಸುತ್ತೇವೆ. ಈ ಪ್ರಪಂಚದ ಕಷ್ಟದುಃಖಗಳನ್ನು ಹೃತ್ಪೂರ್ವಕವಾಗಿ ಭಾವಿಸಬಲ್ಲಂತಹ ವ್ಯಕ್ತಿ ನಮಗೆ ಬೇಕು. ಕೇವಲ ಇವುಗಳನ್ನು ಅನುಭವಿಸಬಲ್ಲಂತಹ ವ್ಯಕ್ತಿ ಮಾತ್ರವಲ್ಲ, ವಸ್ತುವಿನ ಅಂತರಾಳಕ್ಕೆ ಪ್ರವೇಶಿಸಿ ಅದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವಂಥವನೂ ನಮಗೆ ಬೇಕು. ಅವನು ಇಲ್ಲಿಯೂ ನಿಲ್ಲಕೂಡದು. ತಾವು ಏನನ್ನು ಅನುಭವಿಸಿರುವನೋ, ಏನನ್ನು ತಿಳಿದುಕೊಂಡಿರುವನೋ ಅದನ್ನು ಕಾರ್ಯಗತಗೊಳಿಸಬಲ್ಲ ವ್ಯಕ್ತಿಯೂ ನಮಗೆ ಬೇಕು. ಇಂತಹ ಭಾವ, ಯುಕ್ತಿ ಮತ್ತು ಕ್ರಿಯಾಶೀಲತೆಯ ಸಾಮರಸ್ಯ ನಮಗೆ ಬೇಕು. *(ಕೃತಿಶ್ರೇಣಿ, ೬.೯೬)*

ಇತರರು ನಿಷ್ಕರುಣೆಗಳಾಗಿ ನಮ್ಮನ್ನು ನೋಯಿಸಿದಾಗ ನಾವೇನು ಮಾಡಬೇಕು? ಇತರರನ್ನು ನೋಯಿಸುವವರ ಮನಸ್ಸಿನಲ್ಲಿಯೂ ಏನಾದರೂ ಒಂದು ಬಗೆಯ ನೋವಿರುತ್ತದೆ. ಆಂತರಿಕ ನೋವಿಲ್ಲದವರಾರೂ ಇತರರಿಗೆ ನಿರುದ್ದೇಶದಿಂದ ನೋವನ್ನುಂಟುಮಾಡುವುದಿಲ್ಲ. ಇತರರು ನಮ್ಮನ್ನು ನೋಯಿಸಿದಾಗ ಅವರ ಆಂತರಿಕ ನೋವನ್ನು ಭಾವಿಸಿ ಅವರ ಬಗ್ಗೆಯೂ ಕರುಣೆ ತೋರಿಸಬೇಕು, ಆಂತರ್ಯದಲ್ಲಿ ಅವರಿಗಾಗಿ ಪ್ರಾರ್ಥಿಸಬೇಕು. ಯಾರಿಗೆ ಯಾವ ರೀತಿ ಕರುಣೆ ತೋರಿಸಬೇಕು ಎಂಬುದನ್ನು ನಾವು ಅನುಭವದಿಂದ ಅರಿತುಕೊಳ್ಳಬೇಕು. ನಮ್ಮಲ್ಲಿ ಕರುಣಾಭಾವವಿದ್ದರೆ ಇತರರ ನಿಷ್ಕರುಣೆಯು ನಮ್ಮನ್ನು ಅಷ್ಟಾಗಿ ನೋಯಿಸುವುದಿಲ್ಲ. ಆಂಗ್ಲಭಾಷೆಯ ಒಂದು ಹೇಳಿಕೆಯನ್ನು ಇಲ್ಲಿ ನಾವು ನೆನೆಸಿಕೊಳ್ಳಬಹುದು : ''Kindness in ourselves is the honey that blunts the sting of unkindness in others.''